## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ.ನಂ. 484/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಮಣಿಕಂಠ |
| ತಂದೆಯ ಹೆಸರು | : | ಹುನುಮಾಬೋವಿ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಚೆನ್ನಪಟ್ಟಣ ಟೌನ್. |

**ಸಾಕ್ಷಿಯನ್ನು ದಿನಾಂಕಃ 04.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-2 ಮತ್ತು ಚಾಸಾ-3 ರವರ ಪರಿಚಯವಿರುತ್ತದೆ, ಅವರು ನಮ್ಮ ಗ್ರಾಮದವರು. ಚಾಸಾ-4 ಮತ್ತು ಚಾಸಾ-5 ರವರ ಪರಿಚಯವಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೇ ಆರೋಪಿತರ ಪರಿಚಯವಿರುತ್ತದೆ. 1 ನೇ ಆರೋಪಿ ಪರಿಚಯವಿರುವುದಿಲ್ಲ.

ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ. 1 ನೇ ಆರೋಪಿಯು 2 ನೇ ಆರೋಪಿಗೆ ತನ್ನ ಮಗುವನ್ನು ಕಾನೂನು ಬಾಹಿರವಾಗಿ ನೀಡಲು ಪ್ರಯತ್ನಿಸಿರುವುದಿಲ್ಲ ಹಾಗು 2 ನೇ ಆರೋಪಿಯು 1 ನೇ ಆರೋಪಿಯ ಮಗುವನ್ನು ಕಾನೂನು ಬಾಹಿರವಾಗಿ ಪಡೆಯಲು ಪ್ರಯತ್ನಿಸಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

2 ನೇ ಆರೋಪಿಗೆ ಮದುವೆಯಾಗಿ ಸುಮಾರು 19 ವರ್ಷಗಳಾಗಿದ್ದರೂ ಮಕ್ಕಳಾಗಿರುವುದಿಲ್ಲ, ಯಾರಾದರೂ ತನಗೆ ಮಕ್ಕಳನ್ನು ದಾನ ಮಾಡಿಕೊಟ್ಟರೆ

ಸಾಕುವುದಾಗಿ ತಿಳಿಸಿದ್ದು, ಅದರಂತೆ 1 ನೇ ಆರೋಪಿಯು ತಾನು ಈಗ 05 ತಿಂಗಳ ಗರ್ಭಿಣಿಯಾಗಿದ್ದು ತನಗೆ ಹುಟ್ಟುವ ಮಗುವನ್ನು ತಾನು 2 ನೇ ಆರೋಪಿಗೆ ದಾನವಾಗಿ ಕೊಡುವುದಾಗಿ ಒಪ್ಪಿಕೊಂಡಿರುತ್ತಾರೆಂದರೆ ಸರಿಯಲ್ಲ. ನಂತರ ದಿನಾಂಕಃ 07.04.2022 ರಂದು 2 ನೇ ಆರೋಪಿಯು 1 ನೇ ಆರೋಪಿಗೆ ಜನಿಸಿದ ಹೆಣ್ಣು ಮಗುವನ್ನು ಪಡೆದುಕೊಂಡು ಬಂದಿದ್ದು ದಿನಾಂಕಃ 09.04.2022 ರಂದು ಸದರಿ ಮಗುವನ್ನು 2 ನೇ ಆರೋಪಿಯು ಕಾನೂನು ರೀತಿಯಲ್ಲಿ ಪಡೆದುಕೊಂಡಿರುವುದಿಲ್ಲವೆಂದು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ವಿಚಾರವನ್ನು ತಿಳಿದ 2 ನೇ ಆರೋಪಿಯು ಸದರಿ ಮಗುವನ್ನು 1 ನೇ ಆರೋಪಿಗೆ ವಾಪಸ್ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಈ ಬಗ್ಗೆ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ನಂತರ ದಿನಾಂಕಃ 15.04.2022 ರಂದು ನಾನು ಪೋಲೀಸರ ಮುಂದೆ ಈ ಎಲ್ಲಾ ಸಂಗತಿಗಳ ಬಗ್ಗೆ "ವೇದಾವತಿಯವರು ನಮ್ಮ ಗ್ರಾಮದವರಾಗಿದ್ದು ---------------------------------- ಪ್ರಯತ್ನಿಸಿರುವುದು ತಪ್ಪಾಗಿರುತ್ತದೆ." (ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ) ಎಂಬಂತೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಭಾಗವನ್ನು **ನಿ.ಪಿ.-5** ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದು ಆ ಬಗ್ಗೆ ಪೋಲೀಸರಿಗೆ ನಿ.ಪಿ.-5 ರಂತೆ ಹೇಳಿಕೆ ನೀಡಿದ್ದರೂ ಸಹ 2 ಮತ್ತು 3 ನೇ ಆರೋಪಿಗಳು ನನಗೆ ಪರಿಚಿತರಾಗಿದ್ದು ಮತ್ತು ಆತ್ಮೀಯರಾದ್ದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> ಆರೋಪಿಗಳ ಪರ ವಕೀಲರಿಂದಃ ಏನೂ ಇರುವುದಿಲ್ಲ.**

**<u>ಮರು ವಿಚಾರಣೆ: ಇರುವುದಿಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**